


ಭಾಷಣಕ್ಕೆ ಹೋದವರು ಬರಿಗೈ ಬರುವುದಿಲ್ಲ ಎಂದು ಮನೆಯವರು ನಿರೀಕ್ಷಿಸುತ್ತಿರುತ್ತಾರೆ. ಆದ್ದರಿಂದ ಭಾಷಣಕಾರರಿಗೆ ಆಯಾ ಭಾಗದ ವಿಶಿಷ್ಟ ಬೆಳೆಸನ್ನೊ ತಿನಿಸನ್ನೊ ಕೊಟ್ಟು ಕಳಿಸುವುದು ಉಚಿತ. ಒಂದೊಮ್ಮೆ ಕೊಡದಿದ್ದರೆ ನಾನೇ ಕರದಂಟನ್ನೊ ಕುಂದವನ್ನೊ ಕೊಂಡು ಆತಿಥೇಯರು ಕೊಟ್ಟದ್ದೆಂದು ಹೇಳಿ ಅವರ ಮಾನ ಉಳಿಸುತ್ತೇನೆ. ಚಿಕ್ಕೋಡಿ ಭಾಗದ ಕಾರ್ಯಕ್ರಮಕ್ಕೆ ಹೋದಾಗ ಒಂದು ಪೆಂಟಿ ಬೆಲ್ಲ ತಂದಿದ್ದೆ. ಅಂಕೋಲೆಯ ಕಾರ್ಯಕ್ರಮದಲ್ಲಿ ಬ್ಯಾಗುತುಂಬ ಬಸಳೆಸೊಪ್ಪಿನ ಸಿಂಬೆಯನ್ನೂ ಬಣ್ಣದ ಸೌತೆಕಾಯನ್ನೂ ಸಮರ್ಪಿಸಿದ್ದರು. ಮಡಿಕೇರಿಯಲ್ಲಿ ಪುಣ್ಯಾತ್ಮರು ಕೊಟ್ಟ ಚಕ್ಕೆ ಏಲಕ್ಕಿ ಲವಂಗ ಕಾಫಿಪುಡಿಗಳ ಪೊಟ್ಟಣ ಖರ್ಚಾಗಲು ಎರಡು ವರ್ಷ ಬೇಕಾಯಿತು. (ಅವತ್ತಿನಿಂದ ಕೊಡಗಿನ ಅಭಿಮಾನಿಗಳು ಹೆಚ್ಚಾಗಿದ್ದು, ಆ ಜಿಲ್ಲೆಯ ಯಾವುದೇ ಕರೆಯನ್ನು ತಪ್ಪಿಸಬಾರದೆಂದು ಮನೆಯಲ್ಲಿ ನಿಲುವಳಿ ಸೂಚನೆಯಿದೆ). ಹಿಂದೊಮ್ಮೆ ಮುದ್ದೇಬಿಹಾಳದ ಕಾರ್ಯಕ್ರಮದಲ್ಲಿ ಮಾತಾಡುತ್ತ, 'ನಾನು ಮೈಸೂರಿನ ಕಡೆಯವನು. ಮುದ್ದೆ ಸಂಸ್ಕೃತಿಯವನು. ಆದರೆ ಈ ಭಾಗಕ್ಕೆ ಬಂದ ಮೇಲೆ ಮುದ್ದೆ ಮರೆತು ಜೋಳದರೊಟ್ಟಿ, ಬದನೆಪಲ್ಯ, ಶೇಂಗಾಹಿಂಡಿಯ ಅಭಿಮಾನಿಯಾಗಿದ್ದೇನೆ' ಎಂದು ಭಾವುಕವಾಗಿ ಹೇಳಿದೆ. ಹೊರಡುವ ಸಮಯಕ್ಕೆ ಕಾರ್ಯಕರ್ತರು 'ಸರ, ಜರ ಟ್ಯಾಕ್ಸಿ ಡಿಕ್ಕಿ ಬಾಗಲ ತಗಸರಿ' ಎಂದರು. ನೋಡಿದರೆ ಐವತ್ತು ಕಟುಕಲ ರೊಟ್ಟಿ, ಒಂದು ಕೆಜಿಯಷ್ಟು ಶೇಂಗಾ ಹಿಂಡಿ, 20 ಶೇಂಗಾಹೋಳಿಗೆ ಪ್ಯಾಕು. (ಆದರೆ ಈತನಕ ಯಾರೂ ನನಗೆ